ಮಳೆ! ಅನ್ನೋರು. ಆ ಥರ ಕುಂಭದ್ರೋಣ ಮಳೆ ಸುರಿಯುತ್ತಿದ್ದರೆ ಎರಡು ಅಡಿ ಮುಂದೆ ಕಾಣುವುದು ಸಹ ದುಸ್ತರವಾಗುತ್ತಿತ್ತು. ಇಷ್ಟು ಹೊತ್ತಿಗೆ ನನ್ನ ಮತ್ತು ಮಳೆಯ ಒಡನಾಟದ ಬಗ್ಗೆ ಅರಿತಿದ್ದ ಪ್ರಸಾದ್ ಕಚೇರಿಯಿಂದ ಆಗಾಗ ಫೋನ್ ಮಾಡಿ ದಯವಿಟ್ಟು ಮಳೇಲಿ ಹೊರಗೆಹೋಗ್ಬೇಡ ಎಂದು ವಿನಂತಿಸುತ್ತಿದ್ದರು. 'ಗೊತ್ತಿಲ್ದೆ ಇರೋ ಜಾಗ ಅನುತಾಯಿ! ಮಳೆ ಬಂದಾಗ ಜೋಪಾನ ಕಂದ!' ಎಂದು 22 ವಯಸ್ಸಿನ ಈ ಕೂಸನ್ನು ಅಪ್ಪಅಮ್ಮ ಆಗಾಗ ಎಚ್ಚರಿಸುತ್ತಿದ್ದರು.

ಮಳೆಯ ಸೋದರಸಂಬಂಧಿ ಹಿಮದ ಪರಿಚಯ ಮೊದಲಬಾರಿಗೆ ಆಗಿದ್ದು ಕೂಡ ಬೀವರ್ಟನ್‌ನಲ್ಲಿ ಇದ್ದಾಗಲೇ. ಮಳೆಯಷ್ಟು ಸ್ನೇಹಸ್ವಭಾವವಿಲ್ಲದೆ ಸ್ವಲ್ಪ ಶೀತಲ ಮನೋಭಾವ ಹೊಂದಿದ್ದ ಸುಂದರವಾದ ಹಿಮದ ಜೊತೆಗಿನ ಗೆಳೆತನ, ಆಟ ಬಹಳ ಚೆನ್ನಾಗಿರುತ್ತಿತ್ತು. ಆದರೂ ನಾನು ಪಕ್ಷಾಂತರ ಮಾಡಲಿಲ್ಲ. ಸರಳಸ್ವಭಾವದ ಮಳೆಯೇ ಇಂದಿಗೂ ನನ್ನ ಅಚ್ಚುಮೆಚ್ಚಿನ ಒಡನಾಡಿ.

ಕ್ಯಾಲಿಫೋರ್ನಿಯಾದಲ್ಲಿ ವಾಸವಾಗಿದ್ದಾಗ ಮಳೆ ಬಂದರೆ ತಡಬಡಾಯಿಸೊ ವಾಹನಚಾಲಕರನ್ನು ನೋಡಿ 'ಈ ಥರ ಸಪ್ಪೆ ಮಳೆಗೆ ಒದ್ದಾಡ್ತಾರಲ್ಲಾ, ಇನ್ನು ಪೋರ್ಟ್‌ಲ್ಯಾಂಡ್ ಪ್ರದೇಶಕ್ಕೆ ಈ ಜನರನ್ನ ಕಳಿಸಿದ್ರೆ ಏನು ಗತಿ?!' ಎಂದು ಅಣಕಿಸುತ್ತಿದ್ದೆ. ಈ ಮಧ್ಯೆ ಪ್ರವಾಸಗಳಿಗೆ ಹೋದಾಗ ಫ್ಲಾರಿಡಾ ಹಾಗೂ ವಾಷಿಂಗ್ಟನ್ ರಾಜ್ಯಗಳ ಕ್ಲೌಡ್ ಬರ್ಸ್ಟ್ ಮಳೆಯ ರೋಚಕತೆಯನ್ನೂ ಅನುಭವಿಸಿದೆ.

ಜೀವನದಲ್ಲಿ ಮೊದಲಬಾರಿಗೆ ನಾನು ಗುಡುಗುಮಿಂಚುಗಳಿಗೆ ಹೆದರಿದ್ದು ಟೆಕ್ಸಾಸ್ ರಾಜ್ಯದ ಡಲ್ಲಾಸ್ ನಗರದಲ್ಲಿ ವಾಸವಾಗಿದ್ದಾಗ. ಅಮೆರಿಕ ಸಂಯುಕ್ತ ರಾಜ್ಯಗಳ ಪೈಕಿ ಎರಡನೇ ಅತಿ ದೊಡ್ಡದಾದ ರಾಜ್ಯವೆಂಬ ಹೆಗ್ಗಳಿಕೆಗೆ ಪಾತ್ರವಾದ ಟೆಕ್ಸಾಸ್, ಸಮತಟ್ಟಾದ ಬಯಲುಪ್ರದೇಶ. 'ಎವ್ವೆರಿಥಿಂಗ್ ಈಸ್ ಬಿಗ್ ಇನ್ ಟೆಕ್ಸಾಸ್' ಎನ್ನುವ ನಾಣ್ನುಡಿಗೆ ತಕ್ಕಂತೆ ಇಲ್ಲಿನ ಕೋಲ್ಮಿಂಚುಗಳ ನರ್ತನ ಹಾಗೂ ಗುಡುಗುಗಳ ಅಸಾಧಾರಣ ಶಬ್ದಗಳು ಪ್ರಳಯದ ಬರುವಿಕೆಯಂತೆ ಭಾಸವಾಗುತ್ತಿತ್ತು. ಸದ್ಯದಲ್ಲೆ ಹುಟ್ಟಲಿದ್ದ ನಮ್ಮ ಪುಟ್ಟ ಕಂದಮ್ಮನಿಗೆ ಎಲ್ಲಿ ಭಯವಾಗುತ್ತದೋ ಎಂದು ಹೊಟ್ಟೆಯ ಮೇಲೆ ಕೈಯಿಟ್ಟು ಮಗುವಿಗೆ ಸ್ವಾಂತನ ಹೇಳುತ್ತಿದ್ದೆ.

ತಾಯ್ನಾಡು ಬಿಟ್ಟು ವಿದೇಶಕ್ಕೆ ಹೋಗುವ ಮೊದಲು ಯಾರಾದರೂ ಅಲ್ಲಿ ಮಳೆಗೂ ಇಲ್ಲಿ ಮಳೆಗೂ ವ್ಯತ್ಯಾಸ ಇದೆ ಅಂದಿದ್ದರೆ ಮಳೆ ಅಲ್ಲ, ಇವರಿಗೇ ಏನೋ ಕೊಂಚ ವ್ಯತ್ಯಾಸ ಆದ ಹಾಗಿದೆ ಎಂದು ತೀರ್ಮಾನಿಸುತ್ತಿದ್ದೆನೋ ಏನೋ. ಆದರೆ ವಿದೇಶದಲ್ಲಿ ಒಂದೆರಡು ವರ್ಷ ಕಳೆಯುವ ಹೊತ್ತಿಗೆ ನನ್ನ ತವರಿನ ಹಂಬಲ ಕಾಡಿದಾಗ, ಇದೇ ಮೋಡ ನನ್ನ ತವರಿಗೂ ಹೋಗಿ ಮಳೆ ಸುರಿಸುತ್ತ? ಎಂದೆಲ್ಲ ಯೋಚನೆ ಬರುತ್ತಿತ್ತು. ಅಲ್ಲಿಯ ಮಳೆಯ ರಭಸ, ಮಳೆ ಬೀಳುವಾಗ ನಕ್ಕುನಲಿಯುವ ಮರಗಿಡಗಳ ಸೌಂದರ್ಯ ಇವೆಲ್ಲ ಮನಸ್ಸನ್ನು ಸೂರೆಗೊಂಡರೂ ಈ ಮಳೆಗೂ ನಮ್ಮೂರಿನ ಮಳೆಗೂ ಏನೋ ವ್ಯತ್ಯಾಸವಿದೆ ಎಂದು ಮನದ ಯಾವುದೋ ಮೂಲೆಯಲ್ಲಿ ಅಸ್ಪಷ್ಟ ಚಿತ್ರಣ ಮೂಡಹತ್ತಿತು. ಅಲ್ಲಿಯವರೆಗೆ ಮಳೆಯ ಬಹಿರಂಗ ರೂಪವನ್ನು ಪ್ರೀತಿಸಿದ್ದ ನಾನು, ಅದರ ಅಂತರಂಗವನ್ನರಿಯಲು ಪ್ರಯತ್ನಿಸತೊಡಗಿದೆ.

ಅಲ್ಲಿಯ ಮಳೆಯ ಭೋರ್ಗರೆತ ಪ್ರಿಯತಮನ ಪ್ರೀತಿಯಂತಾದರೆ, ನಮ್ಮೂರಿನ ಮಳೆ ಅಮ್ಮ ಕೊಡುವ ಅನ್ ಕಂಡಿಷನಲ್ ಪ್ರೀತಿಯ ರೀತಿ ಎಂದೆನ್ನಿಸತೊಡಗಿತು. ನಮ್ಮೂರಲ್ಲಿ ಮಳೆ ಆದಾಗ ಬರುತ್ತಿದ್ದ ಮಣ್ಣಿನ ವಾಸನೆ, ಅವಳ ಸೆರಗಿನ ವಾಸನೆ ಥರಾನೆ ಇರುತ್ತಿತ್ತಲ್ವಾ? ಆ ಮಳೆಯ ಸಂವೇದನೆಯೇ ಬೇರೆ, ಆ ಸ್ಪರ್ಶವೇ ಬೇರೆ. ನಮ್ಮೂರಿನ ಗುಡುಗಿನ ಗುಮ್ಮ ಹಿರಿಯರ ಹುಸಿಬೆದರಿಕೆಯಂತೆ. ಇಲ್ಲಿ ಥರ ಜೀವಭಯ ಹುಟ್ಟಿಸುವುದಿಲ್ಲ ಎಂದೆಲ್ಲ ಯೋಚಿಸತೊಡಗಿದ ನನ್ನ ಹುಚ್ಚುಭಾವನೆಗಳಿಗೆ ಸ್ಪಷ್ಟರೂಪ ಬಂದಿದ್ದು ನಮ್ಮ ಪುಟಾಣಿ ವಿಭಾ ಜನಿಸಿದ ಮೇಲೆ.

ಬೆಂಗಳೂರಿನ ಮನೆಯಲ್ಲಿ ಹೆಜ್ಜೆ ಇಡಲಾರಂಭಿಸಿದ ವಿಭಾ, ನೀರಿನ ಬಗ್ಗೆ ನನ್ನಷ್ಟೇ ಒಲವು